2) ಸೇಡಂನಲ್ಲಿ 220 : 110 ಕೆವಿ ರಿಸೀವಿಂಗ್ ಸ್ಟೇಷನ್ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿ ಮೊದಲನೇ 100 ಎಂವಿಎ ಸಾಮರ್ಥ್ಯದ 220:110 ಕೆವಿ ಪವರ್ ಟ್ರಾನ್ಸ್‌ಫಾರ್ಮರ್‌ನ್ನು ಸೆಪ್ಟೆಂಬರ್ 94ರ ಅಂತ್ಯದ ವೇಳೆಗೆ ಸ್ಥಾಪಿಸಿ ಚಾಲನೆಗೊಲಿಸುವ ನಿರೀಕ್ಷೆ ಇದೆ.

3) ದಾವಣಗೆರೆ-ನೆಲಮಂಗಲ ಹೂಡಿ 400 ಕೆವಿ ವಿದ್ಯುತ್ ಪ್ರಸರಣಾ ಮಾರ್ಗದ ನಿರ್ಮಾಣ ಕಾರ್ಯವು ಭರದಿಂದ ಸಾಗುತ್ತಿದ್ದು ಅಂತಿಮ ಹಂತದಲ್ಲಿದೆ. ಹೂಡಿ-ಯಲ್ಲಿ 400 : 200 ಕೆವಿ ರಿಸಿವೀಂಗ್ ಸ್ಟೇಷನ್ನಿನ ನಿರ್ಮಾಣ ಕಾರ್ಯವು ಸಹ ತೀವ್ರ ರೀತಿಯ ಪ್ರಗತಿಯಲ್ಲಿದ್ದು ಅಂತಿಮ ಘಟ್ಟ ತಲುಪಿದೆ.

4) ದಾವಣಗೆರೆಯಲ್ಲಿ 400:200 ಕೆವಿ ರಿಸೀವಿಂಗ್ ಸ್ಟೇಷನ್ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ.

5) ಲಿಂಗಸೂಗೂರಿನಿಂದ ಬಸವನ ಬಾಗೇವಾಡಿಗೆ 220 ಕೆವಿ ವಿದ್ಯುತ್ ಪ್ರಸರಣಾ ಮಾರ್ಗವನ್ನು ನಿರ್ಮಾಣ ಮಾಡಲಾಗಿದ್ದು ಆಗಸ್ಟ್ 94ರಲ್ಲಿ ಈ ವಿದ್ಯುತ್ ಪ್ರಸರಣಾ ಮಾರ್ಗವನ್ನು ಚಾರ್ಜ್ ಮಾಡಲಾಗಿದೆ. ಬಸವನ ಬಾಗೇವಾಡಿಯಲ್ಲಿ 220:110 ಕೆವಿ ರಿಸೀವಿಂಗ್ ಸ್ಟೇಷನ್ನಿನ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ. ಡಿಸೆಂಬರ್ 94ರ ಅಂತ್ಯದ ವೇಳೆಗೆ ಮೊದಲ 100 ಎಂವಿಎ ಸಾಮರ್ಥ್ಯದ 220 :110 ಕೆವಿ ಪವರ್ ಟ್ರಾನ್ಸ್‌ಫಾರ್ಮರ್‌ನ್ನು ಸ್ಥಾಪಿಸಿ ಚಾಲನೆಗೊಳಿಸುವ ಗುರಿಯನ್ನು ಹೊಂದಿದೆ.

6) ರಾಯಚೂರಿನಲ್ಲಿರುವ 220 : 110 ಕೆವಿ ರಿಸೀವಿಂಗ್ ಸ್ಟೇಷನ್ನಿನಲ್ಲಿ ಇನ್ನೊಂದು 100 ಎಂವಿಎ ಸಾಮರ್ಥ್ಯದ ಪವರ್ ಟ್ರಾನ್ಸ್‌ಫಾರ್ಮರನ್ನು ಸ್ಥಾಪಿಸಲು ಉದ್ದೇಶಿಸಿದೆ.

ಈ) ಬೀದರ್, ಗುಲ್ಬರ್ಗಾ, ರಾಯಚೂರು, ಬಿಜಾಪುರ, ಬಳ್ಳಾರಿ, ತುಮಕೂರು ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ವಿದ್ಯುತ್ ಸರಬರಾಜಿನ ಪರಿಸ್ಥಿತಿಯು ಸುಧಾರಣೆಗೊಳ್ಳುವುದು.

ವಿಷಯ : ರಾಷ್ಟ್ರೀಯ ಹೆದ್ದಾರಿ ನಂ. 17ರಲ್ಲಿ ಸಂಚಾರಿ ಒತ್ತಡ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 384 (603)

ಶ್ರೀಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿ ನಂ. 17ರಲ್ಲಿ ಮಂಗಳೂರಿನಿಂದ ಬೈಂದೂರು ತನಕ ಬಹಳಷ್ಟು ವಾಹನಗಳ ಸಂಚಾರದ ಒತ್ತಡವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ವಾಹನ ಸಂಚಾರಿ ಒತ್ತಡವನ್ನು ತಪ್ಪಿಸಲು ಕಾರ್ಕಳ ಹೆಬ್ರಿ ಹಾಲಾಡಿ ಕೊಲ್ಲೂರು ಬೈಂದೂರಿನವರೆಗಿನ ರಾಜ್ಯ ರಸ್ತೆಯನ್ನು ಅಗಲಿಸುವ ಯೋಜನೆ ಸರ್ಕಾರಕ್ಕೆ ಇದೆಯೇ

ಇ) ಈ ರಸ್ತೆಯನ್ನು ವಿಸ್ತರಿಸುವ ಸಲುವಾಗಿ ಸರ್ಕಾರ ಅಂದಾಜು ವೆಚ್ಚವೇನಾದರೂ ಹಾಕಿಕೊಂಡಿದೆಯೇ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಯಾವುದೇ ಪ್ರಸ್ತಾವನೆಗಳು ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ವಿಷಯ : ರಾಷ್ಟ್ರೀಯ ಹೆದ್ದಾರಿಗಳು ಮತ್ತು ಪರಿವರ್ತನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 386 (765)

ಡಾ: ವೈ. ನಾಗಪ್ಪ (ಹರಿಹರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಏಕೀಕರಣಗೊಂಡ ವರ್ಷ ಯಾವ ಯಾವ ಹೆದ್ದಾರಿಗಳು ರಾಷ್ಟ್ರೀಯ ಹೆದ್ದಾರಿಗಳಾಗಿ ಪರಿವರ್ತನೆಗೊಂಡಿದ್ದವು. ಅವುಗಳ ಉದ್ದ ಏನು?

ಆ) ಕರ್ನಾಟಕ ಏಕೀಕರಣಗೊಂಡ ದಿನಾಂಕ : 1-11-1956ರಿಂದ 31-7-1994ರವರೆಗೂ ರಾಜ್ಯದ ಯಾವ ಯಾವ ಹೆದ್ದಾರಿಗಳು ಯಾವ ಯಾವ ವರ್ಷ ರಾಷ್ಟ್ರೀಯ ಹೆದ್ದಾರಿಗಳಾಗಿ ಕೇಂದ್ರ ಸರ್ಕಾರ ಘೋಷಿಸಿದೆ?

ಇ) ಈ ವಿಷಯದಲ್ಲಿ ರಾಜ್ಯ ಸರ್ಕಾರದವರು ಕೈಗೊಂಡ ಕ್ರಮವೇನು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಕರ್ನಾಟಕ ರಾಜ್ಯ ಏಕೀಕರಣಗೊಂಡ ವರ್ಷದಲ್ಲಿ ಮೂರು ರಾಜ್ಯ ಹೆದ್ದಾರಿಗಳು ರಾಷ್ಟ್ರೀಯ ಹೆದ್ದಾರಿಗಳಾಗಿ ಪರಿವರ್ತನೆಗೊಂಡಿದೆ. ಇವುಗಳ ಒಟ್ಟು ಉದ್ದ 903 ಕಿ.ಮೀ. ಇರುತ್ತದೆ. ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಲಾಗಿದೆ.

ಆ) ಕರ್ನಾಟಕ ಏಕೀಕರಣಗೊಂಡ ದಿನಾಂಕ : 1-11-56 ರಿಂದ 31-7-94ರವರೆಗೆ ನಾಲ್ಕು ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಘೋಷಿಸಿದೆ. ವಿವರಗಳನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ.

ಇ) ಈ 7 ರಾಜ್ಯ ಹೆದ್ದಾರಿಗಳ ಪರಿವರ್ತನೆಯಾದ ನಂತರ ಕೇಂದ್ರ ಸರ್ಕಾರವು ಇವುಗಳನ್ನು ರಾಷ್ಟ್ರೀಯ ಹೆದ್ದಾರಿ ಮಟ್ಟಕ್ಕೆ ಅಭಿವೃದ್ಧಿಪಡಿಸಿ ನಿರ್ವಹಿಸುತ್ತಿದೆ.